ಏಪ್ರಿಲ್-2021

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

# ಸ್ವಚ್ಛತಾವಾಣಿ

ವಾರ್ತಾಪತ್ರ

## ಜಲ ಶಕ್ತಿ ಅಭಿಯಾನಕ್ಕೆ ಚಾಲನೆ:





ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ ಶ್ರೀ **ಕೆ.ಎಸ್.ಈಶ್ವರಪ್ಪ** ಅವರು ಹುಬ್ಬಳ್ಳಿಯಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ **ಜಲಶಕ್ತಿ** ಅಭಿಯಾನದ ಉದ್ಘಾಟನೆ ಮತ್ತು ರಾಜ್ಯಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಉದ್ಘಾಟಿಸಿದರು. ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ **ಶ್ರೀ ಎಲ್.ಕೆ.ಅತೀಕ್,** ಪಂಚಾಯತ್ ರಾಜ್ ಇಲಾಖೆಯ ಆಯುಕ್ತರಾದ **ಶ್ರೀಮತಿ ಪ್ರಿಯಾಂಕ ಮೇರಿ ಪ್ರಾನ್ಸಿಸ್,** ನರೇಗಾ ಆಯುಕ್ತರಾದ **ಶ್ರೀ ಅನಿರುದ್ಧ ಶ್ರವಣ್,** ಸಚಿವರು ಮತ್ತು ಇತರ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಏಪ್ರಿಲ್ 09, 2021 ರಂದು ಹುಬ್ಬಳ್ಳಿಯಲ್ಲಿ **'ಜಲ ಶಕ್ತಿ ಅಭಿಯಾನ'ಕ್ಕೆ** ಚಾಲನೆ ನೀಡಿ ಮಾತನಾಡಿದ ಸಚಿವರಾದ **ಕೆ.ಎಸ್ ಈಶ್ವರಪ್ಪನವರು,** ಸಮಗ್ರ ಕೆರೆ ಅಭಿವೃದ್ಧಿ, ಹೂಳು ತೆಗೆಯುವುದು, ಬದು ನಿರ್ಮಾಣ, ಚೆಕ್ ಡ್ಯಾಂ ನಿರ್ಮಾಣ, ಕೊಳವೆ ಬಾವಿ ಮರುಪೂರಣ, ಮಳೆನೀರು ಕೊಯ್ಲು, ಅರಣ್ಯೀಕರಣ ಕಾರ್ಯಗಳು ರಾಜ್ಯದೆಲ್ಲೆಡೆ ಬೃಹತ್ ಪ್ರಮಾಣದಲ್ಲಿ ನಡೆಯಲಿದೆ ಎಂದು ತಿಳಿಸಿದರು. ಈ ಎಲ್ಲಾ ಚಟುವಟಿಕೆಗಳನ್ನು ಕ್ರಿಯಾಶೀಲವಾಗಿ ಕಾರ್ಯಗತಗೊಳಿಸಿದರೆ ಮುಂಬರುವ ದಿನಗಳಲ್ಲಿ ಸಂಭವಿಸಬಹುದಾದ ಕುಡಿಯುವ ನೀರಿನ ಅಭಾವವನ್ನು ತಡೆಗಟ್ಟಬಹುದು ಎಂದು ಹೇಳಿದರು.




## Catch The Rain – ಮ್ಯಾರಥಾನ್ ಸ್ಪರ್ಧೆ



ದಿನಾಂಕ 20 ಏಪ್ರಿಲ್ 2021 ರಂದು **Catch The Rain** ಅಭಿಯಾನದ ಅಂಗವಾಗಿ ಶಿವಮೊಗ್ಗದಲ್ಲಿ ಆಯೋಜಿಸಲಾಗಿದ್ದ ಮ್ಯಾರಥಾನ್‌ಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಚಿವರಾದ **ಶ್ರೀ ಕೆ.ಎಸ್.ಈಶ್ವರಪ್ಪ** ಅವರು ಚಾಲನೆ ನೀಡಿದರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಇತರ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು. ಮಳೆನೀರನ್ನು ಸಂಗ್ರಹಿಸುವ ಮೂಲಕ ಅಂತರ್ಜಲ ಹೆಚ್ಚಿಸಿ ನೀರಿನ ಕೊರತೆಯನ್ನು ತಡೆಗಟ್ಟುವಲ್ಲಿ ಪ್ರತಿಯೊಬ್ಬರೂ ಸಹಕರಿಸಬೇಕು. ಇದರಿಂದ ರಾಜ್ಯದಲ್ಲಿ ಜಲಸಮೃದ್ಧತೆ ಕಾಪಾಡಬೇಕಾಗಿ ಸಚಿವರು ಕರೆ ನೀಡಿದರು.

## ತರಬೇತಿ ಕಾರ್ಯಕ್ರಮಗಳು

**'ಜಲ ಜೀವನ್ ಮಿಷನ್ ಯೋಜನೆ ಪರಿಣಾಮಕಾರಿ ಅನುಷ್ಠಾನ ಹಾಗೂ ಅನುಷ್ಠಾನ ಬೆಂಬಲ ಸಂಸ್ಥೆಗಳ ಜವಾಬ್ದಾರಿಗಳು' ಕುರಿತು ಎರಡು ದಿನಗಳ ತರಬೇತಿ ಕಾರ್ಯಕ್ರಮ**



**ಜಲ ಜೀವನ್ ಮಿಷನ್** ಯೋಜನೆಯಡಿ ಜಿಲ್ಲಾ ಮಟ್ಟದಲ್ಲಿ **ಐ.ಎಸ್.ಎ** ತಂಡದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ **'ಜಲ ಜೀವನ್ ಮಿಷನ್** ಯೋಜನೆಯ ಪರಿಣಾಮಕಾರಿ ಅನುಷ್ಠಾನ ಹಾಗೂ ಅವರ ಜವಾಬ್ದಾರಿಗಳು' ಕುರಿತಂತೆ 3 ಬ್ಯಾಚ್‌ಗಳಲ್ಲಿ ದಿನಾಂಕ 31–03–2021 ಮತ್ತು 01–04–2021, 05–04–2021 ರಿಂದ 06–04–2021, 07–04–2021 ರಿಂದ 08–04–2021 ರವರೆಗೆ ಎರಡು ದಿನಗಳ ವಸತಿ ಸಹಿತ ತರಬೇತಿ ಕಾರ್ಯಕ್ರಮವನ್ನು **ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆ (ANSSIRD),** ಮೈಸೂರು ಇಲ್ಲಿ ಏರ್ಪಡಿಸಲಾಗಿತ್ತು. ಸದರಿ ತರಬೇತಿ ಕಾರ್ಯಕ್ರಮದಲ್ಲಿ **ಜಲ ಜೀವನ್ ಮಿಷನ್** ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲೂ ನೇಮಕಗೊಂಡಿರುವ ಅನುಷ್ಠಾನ ಬೆಂಬಲ ಸಂಸ್ಥೆಗಳ ಸುಮಾರು 160 ಸಿಬ್ಬಂದಿಗಳು ಭಾಗವಹಿಸಿದ್ದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಉಪ–ನಿರ್ದೇಶಕರಾದ **ಮನೋಜ್ ಕುಮಾರ್** ಅವರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ **ಪರಮೇಶ್ವರ ಹೆಗಡೆ,** ನಿರ್ದೇಶಕರು – **ಐಎಸ್ಎ, ದಿನೇಶ್ ಎಸ್,** ಸಮಾಲೋಚಕರು, **ಜಗದೀಶ್ ಸಿ, HRD** ಸಮಾಲೋಚಕರು, **ರಾಮಾಂಜನೇಯ,** ಐ.ಇ.ಸಿ ಸಮಾಲೋಚಕರು ನೆರವೇರಿಸಿಕೊಟ್ಟರು. ತರಬೇತಿಯಲ್ಲಿ **ರಮೇಶ್ ಹೆಚ್,** ಕಾರ್ಯಪಾಲಕ ಅಭಿಯಂತರರು (**ANSSIRD**), ಸಂಗೀತ, ರಸಾಯನಶಾಸ್ತ್ರಜ್ಞರು, ಜಿಲ್ಲಾ ಪ್ರಯೋಗಾಲಯ, ಗ್ರಾ.ಕು.ನೀ. & ನೈ. ವಿಭಾಗ, ಮೈಸೂರು ಜಿಲ್ಲೆ ಹಾಗೂ **ಜೆಜೆಎಂನ** ಜಿಲ್ಲಾ ಯೋಜನಾ ವ್ಯವಸ್ಥಾಪಕರುಗಳಾದ **ಚೇತನ್, ಆಶಾ ಸಿ.ಎಂ, ಯೋಗೀಶ್** ಹಾಗೂ **ಉಮೇಶ್** ಸಂಪನ್ಮೂಲ ವ್ಯಕ್ತಿಗಳಾಗಿ ಭಾಗವಹಿಸಿದ್ದರು.







**ಜಲ ಜೀವನ್ ಮಿಷನ್** ಯೋಜನೆ ಕುರಿತಂತೆ ನೀರಿನ ನಿರ್ವಹಣೆಯ ಇತಿಹಾಸ, **ಜಲ ಜೀವನ್ ಮಿಷನ್ ಯೋಜನೆ** ಗುರಿ–ಉದ್ದೇಶಗಳು, ಸಾಂಸ್ಥಿಕ–ಕಾರ್ಯತಂತ್ರಗಳಾದ **ರಾಷ್ಟ್ರೀಯ ಜಲ ಜೀವನ್ ಮಿಷನ್ (NJJM), ರಾಜ್ಯ ಮಟ್ಟ– ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್ (SWSM), ಜಿಲ್ಲಾ ಮಟ್ಟ– ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ (DWSM), ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ (VWSC),** ಸಮುದಾಯದ ಪಾತ್ರ, ನೆರವು ಚಟುವಟಿಕೆಗಳು, ನೀರಿನ ಗುಣಮಟ್ಟ ಮೇಲ್ವಿಚಾರಣೆ ಮತ್ತು ಕಣ್ಗಾವಲು, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಹಾಗೂ ಸುಸ್ಥಿರ ಅಭಿವೃದ್ಧಿ ಗುರಿ, ಮಾಹಿತಿ, ಶಿಕ್ಷಣ ಮತ್ತು ಸಂವಹನ ಹಾಗೂ ಮಾನವ ಸಂಪನ್ಮೂಲ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದ ಪ್ರಕ್ರಿಯೆ ಹಾಗೂ ಕಾರ್ಯವಿಧಾನ, **ಜಲ ಜೀವನ್ ಮಿಷನ್** ಯೋಜನೆಯ ತಾಂತ್ರಿಕ ವಿಚಾರಗಳು, ಸಮುದಾಯ ವಂತಿಕೆ, **Field Test Kit** ಬಗ್ಗೆ ತರಬೇತಿಯಲ್ಲಿ ತಿಳಿಸಲಾಯಿತು. ಇದರ ಜೊತೆಗೆ ಬಹು ಗ್ರಾಮ ಕುಡಿಯುವ ನೀರಿನ ಯೋಜನೆ ಅನುಷ್ಠಾನದ ಜಿಲ್ಲೆಗೆ ಕ್ಷೇತ್ರ ಭೇಟಿಯನ್ನು ಹಮ್ಮಿಕೊಂಡು ಪ್ರಾಯೋಗಿಕವಾಗಿ ತರಬೇತಿ ನೀಡಲಾಯಿತು.